

# ಮಿತ ನುಡಿ ಕಣ್ಣ ಕಿಡಿಯ ಬಾಲಿವುಡ್ ಬಂಡುಕೋರ

**ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಪ್ರತಿಭೆಗಳನ್ನು ಶ್ಯಾಮ್ ಬೆನೆಗಲ್ ತರಹದ ನಿರ್ದೇಶಕರು ದಶಕಗಳ ಹಿಂದೆ ಬೆರಳು ಹಿಡಿದು ನಡೆಸಿದ್ದರು. ಈ ಕಾಲಮಾನದಲ್ಲಿ ರಂಗ ನೆಚ್ಚಿಕೊಂಡವರು ಏಗಬೇಕಾದದ್ದು ಸಾಕಷ್ಟಿದೆ. ಇರ್ಫಾನ್ ಖಾನ್ ಹಾಗೆ ಅಲೆಯ ವಿರುದ್ಧ ಈಜಿಕೊಂಡು, ಬಾಯಿಬಡುಕ ಬಾಲಿವುಡ್‌ನಲ್ಲಿ ತಮ್ಮದೇ ತಂಗಾಳಿಯನ್ನು ತೀಡಿಹೋದದ್ದು ಒಂದು ಮರೆಯಲಾಗದ ಕಾವ್ಯ. ಏಪ್ರಿಲ್ 29ರಂದು ನಿಧನರಾದ 'ಬಾಲಿವುಡ್ ಬಂಡುಕೋರ' ಇರ್ಫಾನ್ ಕುರಿತೊಂದು ಆಪ್ತನೆನಪು.**

■ **ವಿಶಾಖ ಎನ್.**

ಇನ್ನೇನು ಈಗಲೋ ಆಗಲೋ ಹೊರಬಂದಾವೇನೋ ಎಂಬಂತಹ ಕಣ್ಣುಗಳು. ಮೊದಲ ನೋಟದಲ್ಲಿ ಒಂಥರಾ ಭಾವಶೂನ್ಯ ಎನಿಸುವ ಚಹರೆ. ಅದರ ಮೇಲಿನ ಗೆರೆಗಳ ಮೇಲೆ ಪ್ರಜ್ಞಾಪೂರ್ವಕವಾಗಿ ಕುಣಿಯುವ ಉಡಾಫೆ. ನಖಶಿಖಾಂತ ಪೊಗರು ತುಂಬಿರುವ ವ್ಯಕ್ತಿತ್ವ ಇರಬೇಕು ಎಂದು ಒಂದು ತೀರ್ಮಾನಕ್ಕೆ ಬರುವ ಹೊತ್ತಿಗೆ ತುಟಿಮೇಲೊಂದು ನಗು. ಅದು ಮೂಡಿದ ಕೆಲವೇ ಕ್ಷಣಗಳಲ್ಲಿ ಆ ದೊಡ್ಡ ಕಣ್ಣುಗುಡ್ಡೆಗಳ ಪಕ್ಕದಲ್ಲಿ ಮೂಡುವ ಸಿಕ್ಕು. 'ಇದು ಪೊಗರಲ್ಲ; ಆತ್ಮವಿಶ್ವಾಸದ ಭಾವಸಮುದ್ರ' ಎಂದು ತೀರ್ಮಾನವನ್ನು ಬದಲಿಸಲು ಇಂಬುಗೊಡುವಷ್ಟು ಶಕ್ತವಾದ ನಗು.

ಇರ್ಫಾನ್ ಖಾನ್ ಚಹರೆಯಲ್ಲಿ ಹೀಗೆ ತಣ್ಣಗೆ ಸದಾ ಭಾವಸಂಚಲನ. ಪರದೆ ಮೇಲಾಗಲೀ ಹೊರಗಾಗಲೀ ಅವರು ತೆರೆದುಕೊಳ್ಳುತ್ತಿದ್ದ ರೀತಿಯೇ ಹಾಗೆ. ಹೀಗೆ ದೊಡ್ಡ ಕಣ್ಣುಗುಡ್ಡೆ ಇರುವವರೆಲ್ಲ ಅದೆಷ್ಟೋ ಸಂಗತಿಗಳನ್ನು ಕಣ್ಣೊಳಗೇ ಮಡಚಿಟ್ಟುಕೊಂಡಂತೆ ಅದೇಕೆ ಕಾಣುವರೋ? ಅನಂತನಾಗ್ ಅವರಿಗೆ ಇರುವುದೂ ಅಂಥ ಕಣ್ಣುಗುಡ್ಡೆಗಳೇ. ಗುರುದತ್, ನಾಸಿರುದ್ದೀನ್ ಶಾ ಎಲ್ಲರೂ ನಯನಾಭಿನಯದಿಂದ ಕೆಣಕಿದವರೇ.

ದೆಹಲಿಯ 'ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ'ದಲ್ಲಿ